ಶ್ರೀ ಬಿ. ಸೋಮಶೇಖರ್.—ಅಧ್ಯಕ್ಷರೇ, ಹಣಕಾಸಿನ ಸ್ಥಿತಿ ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೭ ಪಾಣಿಮಂಗಳೂರು ಸೇತುವೆಯ ಹತ್ತಿರ ಪೋಲೀಸ್ ಬಂದೋಬಸ್ತ್‌ನ್ನು ಒದಗಿಸುವುದರ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪಾಣಿ ಮಂಗಳೂರು ಸೇತುವೆ ರಾಜ್ಯದ ಹೆದ್ದಾರಿಯಲ್ಲಿದೆ. ಚಾರ್ಮಾಡಿ, ಸಿರಾಡಿ ಮಡಿಕೇರಿ ಕಡೆಯ ರಸ್ತೆಗಳ ವಾಹನಗಳು ಇದೇ ರಸ್ತೆಯ ಮೂಲಕ ಸಂಚರಿಸಬೇಕಾಗಿದೆ. ಇದೀಗ ಈ ಪಾಣಿಮಂಗಳೂರು ಸೇತುವೆ ಭಾರಿ ಇಕ್ಕಟ್ಟಾಗಿದ್ದು ವಾಹನಗಳ ಸಂಚಾರಕ್ಕೆ ಭಾರಿ ತೊಂದರೆಯಾಗಿದೆ. ಈ ರಸ್ತೆ ದುರಸ್ತಿ ಮಾಡಂತ ಸಮಾಚಾರ ಕೇಳುತ್ತಿದ್ದರೂ ಇನ್ನೂ ಆಗಿಲ್ಲ. ಈ ಸೇತುವೆಯಲ್ಲಿ ಯಾವುದೇ ಒಂದು ವಾಹನ ಒಂದು ಬದಿಯಿಂದ ದಾಟಿದ ಮೇಲೆಯೇ ಇನ್ನೊಂದು ಬದಿಯಿಂದ ಮತ್ತೊಂದು ಚಲಿಸಬೇಕಾಗಿದೆ. ದಿನನಿತ್ಯ ವಾಹನ ಸಂಚಾರದ ಒತ್ತಡ ಹೆಚ್ಚು ಹೆಚ್ಚಾಗಿದೆ. ಹೆರಿಗೆ ನೋವಿನ ಹೆಂಗಸರನ್ನು ಇನ್ನಿತರ ರೋಗಿಗಳನ್ನು ತೆಗೆದುಕೊಂಡು ಹೋಗಲು ಇಲ್ಲಿಯ ನೂಕಾನುಗ್ಗಲು ಒತ್ತಡದಿಂದ ತಾಸುಗಟ್ಟಲೆ ಕಾಯಬೇಕಾಗುತ್ತದೆ. ಇಲ್ಲಿಯವರೆಗೆ ಒತ್ತಡ ಎಲ್ಲಿಯವರೆಗೆಂದರೆ ದಿನನಿತ್ಯ ಜಗಳ ಗಲಾಟೆಗಳು ಕೂಡ ನಡೆಯುತ್ತಿವೆ. ಇಲ್ಲಿನ ದಿನನಿತ್ಯದ ದೃಶ್ಯ ಅತ್ಯಂತ ಕರುಣಾಜನಕವಾಗಿರುತ್ತದೆ, ಆದಕಾರಣ ಈ ಒತ್ತಡ ಜಗಳ ಗಲಾಟೆ ತಪ್ಪಿಸಬೇಕಾದದ್ದು ಅತ್ಯಂತ ಪ್ರಾಮುಖ್ಯ. ಅತಿ ತ್ವರಿತವಾಗಿ ಈ ಸೇತುವೆಯಲ್ಲಿ ಪೋಲೀಸ್ ಬಂದೋಬಸ್ತ್ ಇಡುವುದು ಅಗತ್ಯ. ಆ ರೀತಿ ಪೋಲೀಸ್ ಬಂದೋಬಸ್ತ್ ಇಟ್ಟು ಜನರಿಗೆ ಒದಗುವ ಕಷ್ಟ ತೊಂದರೆಗಳನ್ನು ಶೀಘ್ರ ನೀಗಿಸುವುದು ಜರೂರಿನ ಕಾರ್ಯವಾಗಿರುತ್ತದೆ. ಈ ಕುರಿತು ಗೃಹಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ.—ದಕ್ಷಿಣ ಕನ್ನಡ ಜಿಲ್ಲೆಯ ಪಾಣಿ ಮಂಗಳೂರಿನ ಬಳಿ ನೇತ್ರಾವತಿ ನದಿಯ ಮೇಲೆ ರಾಷ್ಟ್ರೀಯ ಹೆದ್ದಾರಿಗಳ ಮೇಲೆ ಒಂದು ಹಳೆಯ ಸೇತುವೆ ಇದ್ದು, ಅದರ ಅಗಲ ತೀರಾ ಕಡಿಮೆ ಇದೆ. ಅದರಿಂದಾಗಿ ಆಗಾಗ್ಗೆ ಸಂಚಾರ ಸ್ಥಗಿತಗೊಳ್ಳುತ್ತಿದೆ. ಈ ಹೆದ್ದಾರಿಯಲ್ಲಿ ಸಂಚಾರ ದಿನೇ ದಿನೇ ಜಾಸ್ತಿಯಾಗುತ್ತಿರುವುದರಿಂದ ಇನ್ನೊಂದು ಸೇತುವೆಯನ್ನು ನಿರ್ಮಿಸುವ ಅಗತ್ಯ ಬಂದಿದ್ದು ರಾಷ್ಟ್ರೀಯ ಹೆದ್ದಾರಿ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಹೊಸ ಸೇತುವೆಯನ್ನು ಕಟ್ಟಲು ರೂ ೪ ಕೋಟಿ ವೆಚ್ಚದ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಿ ದೆಹಲಿಯ ಭೂಸಾರಿಗೆ ಮಂತ್ರಾಲಯಕ್ಕೆ ಕಳುಹಿಸಿದ್ದಾರೆ ಎಂದು ತಿಳಿದು ಬಂದಿದೆ.

ಪ್ರಸ್ತುತ ಸಮಸ್ಯೆಯನ್ನು ಬಗೆಹರಿಸಲು ಸೇತುವೆಯ ಎರಡೂ ಕಡೆ ಟ್ರಾಫಿಕ್ ಸಿಗ್ನಲ್‌ಗಳನ್ನು ಸ್ಥಾಪಿಸುವ ಬಗ್ಗೆ ಬೆಂಗಳೂರು ಐ. ಟಿ. ಐ. ನಿಂದ ಅಂದಾಜುಗಳನ್ನು ಪಡೆದು ಮಂಗಳೂರು ರಾಷ್ಟ್ರೀಯ ಹೆದ್ದಾರಿ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಗೆ ಕಳುಹಿಸಲಾಗಿದೆ.

ಈ ಸೇತುವೆಯ ಮೇಲೆ ಸಂಚಾರವನ್ನು ನಿಯಂತ್ರಿಸಲು ಬಂಟ್ವಾಳ ಪೋಲೀಸ್ ಸಿಬ್ಬಂದಿಯನ್ನು ಕಳುಹಿಸಲಾಗುತ್ತಿದೆ. ಮುಂದೆ ಹೊಸ ಸೇತುವೆ ಕಟ್ಟುವ ತನಕ ಇಲ್ಲಿನ ಸಂಚಾರವನ್ನು ನಿಯಂತ್ರಿಸಲು ಅಧಿಕ ಸಿಬ್ಬಂದಿಯನ್ನು ಒದಗಿಸುವುದನ್ನು ಪರಿಶೀಲಿಸಲಾಗುವುದು.

೮. ಗುಲ್ಬರ್ಗಾ ಜಿಲ್ಲೆಯಲ್ಲಿ ತೀವ್ರ ಬಿಸಿಲಿನ ತಾಪದಿಂದ ಮೃತಪಟ್ಟವರಿಗೆ ಪರಿಹಾರ ಹಂತ್ತು ಇದನ್ನು ತಡೆಗಟ್ಟಲು ಹೆಚ್ಚಿನ ರೀತಿಯಲ್ಲಿ ಗಿಡಮರಗಳನ್ನು ಬೆಳೆಸುವ ಬಗ್ಗೆ

ಶ್ರೀ ಸಿ. ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಬಿಸಿಲ ಬೇಗೆಯಿಂದ ಈವರೆಗೆ ಇಬ್ಬರು ವ್ಯಕ್ತಿಗಳು ಮರಣ ಹೊಂದಿದ್ದು ವರ್ತಮಾನ ಪತ್ರಿಕೆಗಳ ಮುಖಾಂತರ ಎಲ್ಲರಿಗೂ ತಿಳಿದ ವಿಷಯ. ಈ ರೀತಿ ದುರ್ಮರಣಕ್ಕೆ ತುತ್ತಾದವರ ಕುಟುಂಬದವರಿಗೆ ಮಾನ್ಯ ಮುಖ್ಯಮಂತ್ರಿಯವರ ನಿಧಿಯಿಂದ ಪರಿಹಾರಧನವನ್ನು ಒದಗಿಸದಿದ್ದರೆ ಕೂಡಲೇ ಒದಗಿಸ ಬೇಕೆಂದು ಒತ್ತಾಯಿಸುತ್ತೇನೆ.